ನರ್ಸಿಂಗ್ ಕಾಲೇಜಿನ ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಹುದ್ದೆ ತಾರತಮ್ಯ

205 (561) ಶ್ರೀಬಂಡೆಪ್ಪ ಖಾಶೆಂಪೂರ (ಬೀದರ್ ದಕ್ಷಿಣ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರಿನಲ್ಲಿರುವ ಕೋಟೆ ನರ್ಸಿಂಗ್ ಕಾಲೇಜಿನಲ್ಲಿ ನಾಲ್ಕು ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಹುದ್ದೆಗಳು ಖಾಲಿ ಇದ್ದರೂ ಸಹ ಕಳೆದ 6–7 ವರ್ಷಗಳಿಂದ ಪದೋನ್ನತಿಯ ಮೇರೆಗೆ ನೇಮಕಾತಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ಒದಗಿಸುವುದು)

(ಆ) ಈ ಹುದ್ದೆಯ ಪದೋನ್ನತಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಏನು; ಈ ಹುದ್ದೆಗೆ ಪದೋನ್ನತಿ ಪಡೆಯದೇ ಎದುರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶುಶ್ರೂಷಕರುಗಳಿಗೆ ಮೀಸಲಾಗಿಡಲಾಗಿದೆಯೇ; (ವಿವರ ನೀಡುವುದು)

(ಇ) 2011–12 ಮಾರ್ಚ್ ಮಾಹೆಯಲ್ಲಿ ನಡೆದ ಕೌನ್ಸಿಲಿಂಗ್‌ನಲ್ಲಿ 4 ಹುದ್ದೆಗಳು ಖಾಲಿ ಇದ್ದರೂ ಸಹ ನೇಮಕಾತಿ ಮಾಡದೇ ಇರುವುದಕ್ಕೆ ಕಾರಣವೇನು; (ವಿವರ ನೀಡುವುದು);

(ಈ) ಕಳೆದ 3 ವರ್ಷಗಳ ಅವಧಿಯಲ್ಲಿ ಮೇಲ್ಕಂಡ ಕಾಲೇಜಿನಲ್ಲಿ ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಎದುರು ಹುದ್ದೆಯಲ್ಲಿ ಇದುವರೆವಿಗೂ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕರುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಉ) ಖಾಲಿ ಇರುವ ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಹುದ್ದೆಯಲ್ಲಿ ಸ್ವಂತ ವೇತನದ ಮೇರೆಗೆ ಕಾರ್ಯನಿರ್ವಹಿಸಲು ಕೋರಿಕೆ ಸಲ್ಲಿಸಿರುವ ಇತರ ಶುಶ್ರೂಷಕರುಗಳಿಗೆ ನೇಮಕಾತಿ ನೀಡದೇ ತಾರತಮ್ಯವಾಗಿರುವುದು ನಿಜವೇ; ಹಾಗಿದ್ದಲ್ಲಿ, ಕಾರಣವೇನು; (ಮಾಹಿತಿ ನೀಡುವುದು)

(ಊ) ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಅನುಸರಿಸುತ್ತಿದೆ; ಈ ನಿಟ್ಟಿನಲ್ಲಿ ಸರ್ಕಾರದ ಸ್ಪಷ್ಟ ನಿಲುವೇನು? (ಸಂಪೂರ್ಣ ಮಾಹಿತಿ ಒದಗಿಸುವುದು)

ಶ್ರೀ ಅರವಿಂದ ಲಿಂಬಾವಳಿ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅ) ಬಂದಿದೆ.

ವ್ಯಂದ ಮತ್ತು ನೇಮಕಾತಿ ನಿಯಮದ ಪ್ರಕಾರ ನರ್ಸಿಂಗ್ ಟ್ಯೂಟರ್ ಹುದ್ದೆಯಿಂದ ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಅಥವಾ ಪ್ರಾಂಶುಪಾಲರು (ಶುಶ್ರೂಷ ತರಬೇತಿ ಶಾಲೆ) ಹುದ್ದೆಗೆ ಪದೋನ್ನತಿ ನೀಡಲು ಅವಕಾಶ ಇರುತ್ತದೆ. ಇಲಾಖೆಯಲ್ಲಿ ನರ್ಸಿಂಗ್ ಟ್ಯೂಟರ್ ಹುದ್ದೆಯಿಂದ ಪ್ರಾಂಶುಪಾಲರು (ಶುಶ್ರೂಷ ತರಬೇತಿ ಶಾಲೆ) ಹುದ್ದೆಗೆ ಪದೋನ್ನತಿ ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಹುದ್ದೆಗೆ ಬಡ್ತಿ ನೀಡಿರುವುದಿಲ್ಲ. ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಹುದ್ದೆಗೆ ಪದೋನ್ನತಿ ನೀಡಲು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರು ಕ್ರಮ ಪ್ರಾರಂಭಿಸಿರುತ್ತಾರೆ.

(ಆ) ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಹುದ್ದೆಗೆ ಪದೋನ್ನತಿ ಪಡೆಯಲು ಬಿ.ಎಸ್ಸಿ (ನರ್ಸಿಂಗ್) ಪದವಿದೊಂದಿಗೆ ನರ್ಸಿಂಗ್ ಟ್ಯೂಟರ್ ಆಗಿ ಕರ್ತವ್ಯ ನಿರ್ವಹಿಸಿರಬೇಕು.

ಶುಶ್ರೂಷಾ ಮಹಾ ವಿದ್ಯಾಲಯ ಬೆಂಗಳೂರು ಇಲ್ಲಿನ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಕಾಲೇಜಿನಲ್ಲಿ ಭೋದನ ಕಾರ್ಯನಿರ್ವಹಿಸುವ ಸಲುವಾಗಿ ಹಾಗೂ ಅನೇಕ ವರ್ಷದಿಂದ ಸದರಿ ಹುದ್ದೆಗಳು ಖಾಲಿ ಇರುವ ಪ್ರಯುಕ್ತ, ಎಂ. ಎಸ್ಸಿ (ನರ್ಸಿಂಗ್) ಸ್ನಾತಕ್ಕೋತ್ತರ ಪದವಿ ಪಡೆದ ಶುಶ್ರೂಷಕರನ್ನು ಎದುರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಲು ನೇಮಿಸಿದೆ.

(ಇ) 2011–12 ನೇ ಮಾರ್ಚ್ ಮಾಹೆಯಲ್ಲಿ ಹಿರಿಯ ಶುಶ್ರೂಷಕರ ಹುದ್ದೆಯಿಂದ ಉಪನ್ಯಾಸಕರ ಹುದ್ದೆಗೆ ಪದೋನ್ನತಿ ನೀಡುವ ಸಲುವಾಗಿ ಕೌನ್ಸಿಲಿಂಗ್ ನಡೆಸಲಾಗಿದೆ.

ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಹುದ್ದೆಗೆ ಪದೋನ್ನತಿ ನೀಡಿರುವುದಿಲ್ಲ. ಆದುದ್ದರಿಂದ ನೇಮಕಾತಿ ಮಾಡಿರುವುದಿಲ್ಲ.

(ಈ) ಕಳೆದ 3 ವರ್ಷಗಳ ಅವಧಿಯಲ್ಲಿ ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಎದುರು ಹುದ್ದೆಯಲ್ಲಿ ಇಲ್ಲಿಯವರೆಗೆ ಕಾರ್ಯನಿರ್ವಹಿಸಿದವರ ವಿವರ ಅನುಬಂಧದಲ್ಲಿ ನೀಡಲಾಗಿದೆ.

(ಉ), (ಊ) ಶುಶ್ರೂಷಾ ಮಹಾ ವಿದ್ಯಾಲಯ ಬೆಂಗಳೂರು ಇಲ್ಲಿ 4 ಕ್ಲಿನಿಕಲ್ ಇನ್ಸ್‌ಸ್ಟ್ರಕ್ಟರ್ ಹುದ್ದೆ ಮಂಜೂರಾಗಿವೆ. 3 ಹುದ್ದೆಗಳಿಗೆ ಶುಶ್ರೂಷಕರನ್ನು ಎದುರು ಹುದ್ದೆಯಲ್ಲಿ ನೇಮಿಸಲಾಗಿದೆ. ಉಳಿದ ಒಂದು ಹುದ್ದೆ ಖಾಲಿ ಇದೆ. ಬಡ್ತಿ ಪ್ರಕ್ರಿಯೆ ಪ್ರಾರಂಭಿಸಿರುವುದರಿಂದ ಈ ಹುದ್ದೆಗಳನ್ನು ಬಡ್ತಿ ನೀಡಿ ಭರ್ತಿ ಮಾಡಲು ಕ್ರಮವಹಿಸಬೇಕಾಗುತ್ತದೆ.

Government College of Nursing, Fort. Bangalore-02.

Clinical-Instructor Posts Details.

Sl. No.	Name of the Staff Working in Clinical Instructor against post	From which Date	Remarks
1	Mr. Prasanna kumar	17.06/2008 till date (In Vacant Place)	
2	Mrs.G. Reddamma	16/04/2010 till date (In Place of vacant)	
3	Pushpa veni N.P	02/09/2010 till date (In Place of Sukanya)	Working in Lecturer Against post from 21/06/2008 to 01/09/2010
4	Mrs Suvarna B Talwar	11/06/2002 to 20/03/2012 (Now Vacant)	Promoted as Lecturer from 21/03/2012.
5	Mrs. Sukanya	31/05/2006 to 26/08/2010	Promoted as Lecturer from 27/08/2010
6	Vacant (One)		
		Sanctioned 4 Posts	

ಸಿ.ಇ.ಟಿ ಸೀಟುಗಳ ಹಂಚಿಕೆಯಲ್ಲಿ ನ್ಯಾಯಾಲಯ ಆದೇಶ ಪಾಲನೆ

214 (14) ಡಾ॥ ಮಹದೇವಪ್ಪ. ಹೆಚ್.ಸಿ. (ಟಿ.ನರಸೀಪುರ) ಮಾನ್ಯ ಉನ್ನತ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಸಿಇಟಿ ಸೀಟು ಹಂಚಿಕೆಯಲ್ಲಿ ಸುಪ್ರೀಂಕೋರ್ಟ್ ಆದೇಶವನ್ನು ಉಲ್ಲಂಘನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

(ಆ) ಜನರಲ್ ಮೆರಿಟ್ ವ್ಯಾಪ್ತಿಗೆ ಬರುವ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಹಾಗೂ ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳನ್ನು ಮೀಸಲಾತಿ ಅಡಿಯಲ್ಲಿ ಪರಿಗಣಿಸಿ